ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಶಿವಾಜಿನಗರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಶಿವಾಜಿನಗರದ ಒಳನೋಟ

1. ಪ್ರದೇಶ: 8.2 sq. km

2. ಜನಸಂಖ್ಯೆ : 184222

3. ವಾರ್ಡ್ :ರಾಮಸ್ವಾಮಿಪಾಳ್ಯ, ಜಯಮಹಲ್, ಹಲಸೂರು, ಭಾರತಿನಗರ, ಶಿವಾಜಿನಗರ ವಸಂತನಗರ, ಸಂಪಂಗಿರಾಮನಗರ

4.ಲೋಕಸಭಾ ಕ್ಷೇತ್ರ : ಬೆಂಗಳೂರು ಕೇಂದ್ರ ವಿಭಾಗ

5. ಒಟ್ಟು ಗೃಹಗಳು : 46186

7. ರಸ್ತೆ ವಿಸ್ತೀರ್ಣ : 249 km8.

8)ಕೆರೆಗಳು :ಹಲಸೂರು

9)ಆರಕ್ಷಕ ಠಾಣೆ :ಹಲಸೂರು, ಭಾರತಿನಗರ, ಶಿವಾಜಿನಗರ ,ಹೈ ಗ್ರೌಂಡ್ಸ್ ಎಸ್ ಆರ್ ನಗರ ,ಕಬ್ಬನ್ ಪಾರ್ಕ್, ಎಂ.ಎಸ್ ಬಿಲ್ಡಿಂಗ್, ಕಮರ್ಷಿಯಲ್

10. ಬಸ್ ನಿಲ್ದಾಣಗಳು : 175

11. ಅಗ್ನಿಶಾಮಕ ಕೇಂದ್ರ :1

12. ಸರ್ಕಾರಿ ಶಾಲೆಗಳು :29

13. ಆಟದ ಮೈದಾನ :9

14) ಪಾರ್ಕ್ :1

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ

ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಶಿವಾಜಿನಗರ ಪ್ರಮುಖ 5 ಬೇಡಿಕೆಗಳು

## ತ್ಯಾಜ್ಯ ನಿರ್ವಹಣೆ

1. ಶಿವಾಜಿನಗರದಲ್ಲಿ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಯ ಚರ್ಚೆಯನ್ನು ಮುನ್ನೆಲೆಗೆ ತರಲು ಅಭಿಯಾನ. ಕಳಪೆ ರೀತಿಯ ತ್ಯಾಜ್ಯ ನಿರ್ವಹಣೆಯ ಸಮಸ್ಯೆಯನ್ನು ಪ್ರಮುಖವಾಗಿಸಲು ಹಾಗೂ ತ್ಯಾಜ್ಯ ನಿರ್ವಹಣೆ ಮತ್ತು ಸ್ವಚ್ಛತೆಯ ಕುರಿತು ಅರಿವು ಮೂಡಿಸಲು ಅಭಿಯಾನವೊಂದನ್ನು ಹಮ್ಮಿಕೊಳ್ಳಲೇಬೇಕು.

2. ಪ್ರತಿ ವಾರ್ಡ್ ಕೂಡ ಅತ್ಯಾಧುನಿಕ ಒಣ ಕಸ ಸಂಗ್ರಹ ಕೇಂದ್ರವನ್ನು ಹೊಂದಿರಬೇಕು. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಎಲ್ಲಾ ವಾರ್ಡ್‌ಗಳಲ್ಲಿಯೂ ಸಹ ಕಡ್ಡಾಯವಾಗಿ ಅತ್ಯಾಧುನಿಕ ಒಣ ಕಸ ಸಂಗ್ರಹ ಕೇಂದ್ರವನ್ನು ಸ್ಥಾಪಿಸಬೇಕು.

3. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ ಮಾಡಬೇಕು. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

4. ಶಿವಾಜಿನಗರ ಕ್ಷೇತ್ರದಾದ್ಯಂತ ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು. ಶಿವಾಜಿನಗರದಲ್ಲಿರುವ ಎಲ್ಲಾ ಗಲೀಜು ಪ್ರದೇಶಗಳನ್ನು ಗುರುತಿಸಬೇಕು, ಸುಂದರಗೊಳಿಸಬೇಕು ಮತ್ತು ಎಚ್ಚರದಿಂದ ಮೇಲ್ವಿಚಾರಣೆ ಮಾಡಬೇಕು.

5. ದೇವಸ್ಥಾನಗಳು, ಶಿಕ್ಷಣ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಆಸ್ಪತ್ರೆಗಳು ಮತ್ತು ಇತರೆ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಶೂನ್ಯ ಕಸದ ಮೂಲವಾಗುವುದಕ್ಕೆ ಉತ್ತೇಜನ ಮತ್ತು ಬೆಂಬಲ ನೀಡಬೇಕು.

## ಸಂಚಾರ ಮತ್ತು ಸಾರಿಗೆ

1. ಶಿವಾಜಿನಗರ ಕ್ಷೇತ್ರದಲ್ಲಿ ದಿನೇದಿನೇ ಉಲ್ಬಣಿಸುತ್ತಿರುವ ಸಮಸ್ಯೆಯೆಂದರೆ ಉಪಯೋಗಿಸದೆ ಬಿಟ್ಟ ವಾಹನಗಳು. ಇದನ್ನು ತಡೆಯಲು, ಈ ರೀತಿಯ ಅನುಪಯುಕ್ತ ವಾಹನಗಳನ್ನು ತೆರವುಗೊಳಿಸಿ ಮರುಬಳಕೆ ಮಾಡಬೇಕು.

2. ಶೀಘ್ರವೇ ಶಿವಾಜಿನಗರದಲ್ಲಿ ಮೆಟ್ರೋ ನಿರ್ಮಾಣ ಕಾರ್ಯ ಆರಂಭವಾಗಲಿದೆ. ಮೆಟ್ರೋ ನಿಲ್ದಾಣ ಕಾಮಗಾರಿಯಿಂದಾಗಿ ಉಂಟಾಗಬಹುದಾದ ಸಂಚಾರ ದಟ್ಟಣೆಯ ಸಮಸ್ಯೆಯನ್ನು ನಿರ್ವಹಿಸಲು ಟ್ರಾಫಿಕ್ ನಿರ್ವಹಣಾ ಯೋಜನೆಯೊಂದನ್ನು ರೂಪಿಸುವುದು ಅಗತ್ಯವಾಗಿದೆ. ಪಾರ್ಕಿಂಗ್ ಸೌಲಭ್ಯ ನೀಡಬೇಕು ಮತ್ತು ಮೆಟ್ರೋ ಸ್ಟೇಷನ್‌ಗಳಿಂದ ಕಡೆಯ ಹಂತದವರೆಗೆ ಸಂಪರ್ಕ ಏರ್ಪಡಿಸಬೇಕು.

3. ಶಿವಾಜಿನಗರದಾದ್ಯಂತ ಪಾದಚಾರಿ ಸ್ನೇಹಿ ಮತ್ತು ಪ್ರವೇಶಿಸಬಹುದಾದ ಪಾದಚಾರಿ ರಸ್ತೆಗಳ ನಿರ್ಮಾಣ

4. ಶಿವಾಜಿನಗರದಲ್ಲಿ ಕೈಗೊಳ್ಳಲಾದ ರಸ್ತೆ ಕಾಮಗಾರಿಗಳ ವಿವರಗಳನ್ನು ನಾಗರೀಕರಿಗೆ ತಿಳಿಸಬೇಕಾದ ಅಗತ್ಯವಿದೆ.

5. ಶಿವಾಜಿ ರಸ್ತೆ, ನಂದಿ ರಸ್ತೆಯಂತಹ ಹೆಚ್ಚು ಟ್ರಾಫಿಕ್ ಹೊಂದಿರುವ ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಒತ್ತಡವನ್ನು ನಿವಾರಿಸಬೇಕಿದೆ.

## ನೀರು

1. ನೀರು ಸರಬರಾಜು ಮಾಡುವ ಸಮಯವನ್ನು ನಾಗರೀಕರಿಗೆ ತಿಳಿಸುವ ವ್ಯವಸ್ಥೆ ಮಾಡಬೇಕಿದೆ.

2. ನಾಗರೀಕರಿಗೆ ಶುದ್ಧ ಕುಡಿಯುವ ನೀರನ್ನು ದೊರಕಿಸಿಕೊಡಲು ಆರ್ಒ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಬೇಕಿದೆ.

3. ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸಬೇಕು ಮತ್ತು ಮಳೆನೀರು ಕೊಯ್ಲು ತಜ್ಞರು ಮತ್ತು ನೀರು ಉಳಿಸುವ ವಾಯುಪೂರಕ (ಏರೇಟರ್)ದÀಂತಹ ಸಾಧನಗಳ ಮಾಹಿತಿ ಸುಲಭವಾಗಿ ದೊರೆಯಲು ಕಿಯೋಸ್ಕ್‌ಗಳು ಲಭ್ಯವಾಗುವಂತೆ ಮಾಡಬೇಕು.

4. ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದನ್ನು ತಡೆಗಟ್ಟಲು ಕ್ರಮಗಳನ್ನು ಕೈಗೊಳ್ಳಬೇಕು.

5. ಮಳೆ ನೀರು ಕಾಲುವೆ ಮತ್ತು ಮೋರಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತುವುದು ಹಾಗೂ ನಿರ್ವಹಿಸುವುದು

## ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ

1. ಶಾಲೆಗಳ ಸಮಗ್ರ ಅಭಿವೃದ್ಧಿ ಮತ್ತು ರೀಬ್ರ್ಯಾಂಡಿಂಗ್

2. ಎಲ್ಲ ನಾಗರೀಕರಿಗೆ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

3. ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಆಪ್ತಸಮಾಲೋಚನಾ ಕೇಂದ್ರದ ಕುರಿತು ಜಾಗೃತಿ ಮೂಡಿಸುವುದು

4. ವೃತ್ತಿಜೀವನ ನಿರ್ಮಾಣ ಅವಕಾಶಗಳಿಗಾಗಿ ಯುವ ಕಾಲೇಜು ವಿದ್ಯಾರ್ಥಿಗಳ ಮೇಲೆ ವಿಶೇಷ ಗಮನ

5. ಶಿವಾಜಿನಗರದಾದ್ಯಂತ ಹೆಚ್ಚಿನ ಪೊಲೀಸ್ ಚೌಕಿಗಳು ಮತ್ತು ನಿರಂತರ ಪೊಲೀಸ್ ಗಸ್ತು ತಿರುಗುವಿಕೆ

## ಪರಿಸರ ಮತ್ತು ಆರೋಗ್ಯ

1. ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಸುತ್ತಲೂ ವಾಯು ಗುಣಮಟ್ಟ ನಿಗಾ ಇರಿಸುವ ಸೂಚಕಗಳನ್ನು ಅಳವಡಿಸಬೇಕು ಮತ್ತು ಮಾಲಿನ್ಯ ಹೆಚ್ಚಿರುವ ಪ್ರದೇಶಗಳಲ್ಲಿ ಮಾಲಿನ್ಯ ಪ್ರಮಾಣ ತಗ್ಗಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಿದೆ.

2. ಎಲೆಗಳನ್ನು ಸುಡುವುದು ಈ ಭಾಗದ ಪ್ರಮುಖ ಸಮಸ್ಯೆಯಾಗಿದ್ದು ಹೆಚ್ಚಿನ ವಾಯುಮಾಲಿನ್ಯಕ್ಕೆ ಕಾರಣವಾಗಿದೆ. ಎಲೆ ಸುಡುವುದನ್ನು ತಪ್ಪಿಸುವ ಸಲುವಾಗಿ ತಪ್ಪಿತಸ್ಥರನ್ನು ಶಿಕ್ಷಿಸುವ ಪ್ರಕ್ರಿಯೆಯೊಂದನ್ನು ಪ್ರಾರಂಭಿಸಬೇಕಿದೆ.

3. ವೈಜ್ಞಾನಿಕ ಮತ್ತು ನಿಯಮಿತವಾಗಿ ಮರ ಕತ್ತರಿಸುವಿಕೆ, ವ್ಯವಸ್ಥಿತ ಹಾಗೂ ನಿಗದಿಯಂತೆ ಮರ ಕತ್ತರಿಸುವಿಕೆ

4. ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳಿಗೆ ಆದ್ಯತೆ

5. ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಶುದ್ಧ ಶೌಚಾಲಯಗಳ ಸುಲಭ ಲಭ್ಯತೆಗೆ ಹೆಚ್ಚಿನ ಬೇಡಿಕೆಯಿದೆ.